(ರೂ. 20/- ಛಾಪಾ ಕಾಗದದಲ್ಲಿ ನೀಡುವುದು)

# ಮುಚ್ಚಳಿಕೆ ಪತ್ರ

ಬೆಂಗಳೂರು ನಗರ ಜಿಲ್ಲೆಯಲ್ಲಿ ವಾಸವಾಗಿರುವ

ಶ್ರೀಮತಿ/ಶ್ರೀ______________________________ ಇವರ

ಮಗ/ಮಗಳು ______________________________ ಆದ ನಾನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ NEET/JEE(A&M) ಪರೀಕ್ಷಾ ಪೂರ್ವ ತರಬೇತಿಗೆ 2021-22ನೇ ಸಾಲಿನಲ್ಲಿ ಅರ್ಜಿ ಸಲ್ಲಿಸುತ್ತಿರುವ ನಾನು ತರಬೇತಿಯ ಎಲ್ಲಾ ವಿವರಗಳನ್ನು ಪೂರ್ಣವಾಗಿ ತಿಳಿದುಕೊಂಡಿದ್ದು, ಸದರಿ ತರಬೇತಿಗೆ ಆಯ್ಕೆಯಾದಲ್ಲಿ ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ವಿಧಿಸುವ ಎಲ್ಲಾ ನಿಯಮಗಳನ್ನು ಪಾಲಿಸುತ್ತೇನೆ ಮತ್ತು ತರಬೇತಿಗೆ ನಿಯಮಿತವಾಗಿ ಹಾಜರಾಗುತ್ತೇನೆ. ಪ್ರಥಮ ಮತ್ತು ದ್ವಿತೀಯ ಪಿಯುಸಿ(11 & 12ನೇ ತರಗತಿ)ಯ ವಾರ್ಷಿಕ ಪರೀಕ್ಷೆ ಹಾಗೂ ಸಕ್ಷಮ ಪ್ರಾಧಿಕಾರ ನಡೆಸುವ NEET/JEE(A&M) ಪರೀಕ್ಷೆಗಳಿಗೆ ಹಾಜರಾಗುತ್ತೇನೆ. ನಾನು ಇಲಾಖೆಗೆ ತಪ್ಪು ಮಾಹಿತಿ ನೀಡಿ ತರಬೇತಿ ಪಡೆದಲ್ಲಿ, ತರಬೇತಿ ಅವಧಿಯಲ್ಲಿ ನಾನು ಶೇ.75 ಕ್ಕಿಂತ ಕಡಿಮೆ ಹಾಜರಾತಿಯನ್ನು ಹೊಂದಿದಲ್ಲಿ ಅಥವಾ ನಾನು ತರಬೇತಿಯನ್ನು ಪೂರ್ಣಗೊಳಿಸದೆ ಯಾವುದೇ ಹಂತದಲ್ಲಿ NEET/JEE(A&M) ಪರೀಕ್ಷಾ ಪೂರ್ವ ತರಬೇತಿಯನ್ನು ಮೊಟಕುಗೊಳಿಸಿದಲ್ಲಿ ನನ್ನ ತರಬೇತಿಗಾಗಿ ಸರ್ಕಾರವು ಮಾಡುವ ಪೂರ್ಣ ವೆಚ್ಚವನ್ನು, ಸರ್ಕಾರವು ವಿಧಿಸುವ ಬಡ್ಡಿಯೊಂದಿಗೆ ಸರ್ಕಾರಕ್ಕೆ ಮರುಪಾವತಿಸಲು ನಾನು ಮತ್ತು ನನ್ನ ತಂದೆ/ತಾಯಿ/ಪೋಷಕರು ಬದ್ಧವಾಗಿರುತ್ತೇವೆ. ಒಂದು ವೇಳೆ ನಾವು ಸರ್ಕಾರಕ್ಕೆ ಸದರಿ ವೆಚ್ಚವನ್ನು ಹಿಂದಿರುಗಿಸದೇ ಇದ್ದಲ್ಲಿ, ರಾಜ್ಯ ಸರ್ಕಾರವು ಇದನ್ನು ಭೂ ಕಂದಾಯ ಬಾಕಿ ಎಂಬುದಾಗಿ ಪರಿಗಣಿಸಿ ವಸೂಲಿ ಮಾಡಲು ಹಾಗೂ ಕಾನೂನಿನ ರೀತ್ಯ ನಮ್ಮ ವಿರುದ್ಧ ಕ್ರಮ ಜರುಗಿಸಲು ನಮ್ಮ ಒಪ್ಪಿಗೆ ಇರುತ್ತದೆ ಎಂದು ದೃಢೀಕರಿಸುತ್ತಾ ಈ ಮುಚ್ಚಳಿಕೆ ಪತ್ರವನ್ನು ಸಲ್ಲಿಸಿರುತ್ತೇವೆ.

ಸ್ಥಳ: ಬೆಂಗಳೂರು
ದಿನಾಂಕ:

(ತಂದೆ/ತಾಯಿ/ಪೋಷಕರ ಹೆಸರು & ಸಹಿ)

(ಅಭ್ಯರ್ಥಿಯ ಹೆಸರು & ಸಹಿ)

D:\2021-22\T-4\CET\Affidavit.docx